ಬಳಕೆಯಾಗಲಿಲ್ಲವೇನೋ? ಮರದ ಇಚ್ಛೆಯನ್ನಿತ್ತೋ? ದೈವದ ಇಚ್ಛೆ ಏನಿತ್ತೋ? ಶೆಟ್ಟರನ್ನು ಒಂದರ ಗಳಿಗೆ ತೀವ್ರವಾದ ವಿಷಾದ ಭಾವವು ಅವುಚಿಕೊಂಡು ಬಿಟ್ಟಿತ್ತು. ಮರುಕ್ಷಣದಲ್ಲೆ ತಮ್ಮನ್ನು ತಾವೇ ಸಮಾಧಾನಿಸಿಕೊಂಡವರಂತೆ, 'ಅಲ್ಲ ಮಾರಾಯ... 'ಕೊಡಿಮರ'ನಾಗಲು ಈ ಮರಕ್ಕೇ ಇಷ್ಟ ಇರ್ಲಿಲ್ವೋ ಏನೋ? ಇರ್ಲಿ ಇರ್ಲಿ... ಎಲ್ಲವೂ ದೈವಚಿತ್ತ. ನಾವೀಗ ಬೇರೆ 'ಹೊಸಮರ'ಕ್ಕೆ ಹುಡುಕಾಟ ಮಾಡ್ಬೇಕು ಅಷ್ಟೆ; ಆ ಸಾಧು ಶೆಟ್ಟಿಯ ಬೈಲಿನ ಮರದ ಸಾವಾಸನೇ ಬೇಡ...' ಎಂದು ಅಂದಾಗ, ಶ್ರೀಧರಾಚಾರಿಯು 'ನಿಜ... ನಿಜ... ದೈವಕ್ಕೂ ಧರ್ಮಕ್ಕೂ ಒಪ್ಪಿಗೆಯಾಗುವ ಮರವೇ ಆಗ್ಬೇಕು; ನಾಳೆ ರಾತ್ರಿಯೊಳಗೆ ಹೊಸ ಮರ ಹುಡುಕ್ಲೇ ಬೇಕು. ಅದೂ ನಮ್ಮ ಬೈಲಿಗೆ ಹತ್ತಿರ ಇರುವ ಮರವೇ ಆಗ್ಬೇಕು. 'ಮೊನ್ನೆ ಕೊಂಬು ವಾದ್ಯದಲ್ಲಿ ಆ ದೈವಸಾನಕ್ಕೆ ತಂದ ಕೊಡಿಮರ ಟೊಳ್ಳಾಗಿದೆಯಂತೆ' ಎಂಬ ಸುದ್ದಿ ಊರಿಗೆಲ್ಲ ಹರಡಿದ್ರೆ, ನಮ್ಗೆ ಆಗದವರು, 'ದೈವ ಮುನಿದಿದೆ' ಅಂತನೆ ಪುಕಾರು ಹಬ್ಬಿಸಿ ಬಿಡ್ಬಹುದು. ಯಾರು ಹಬ್ಬಿಸದಿದ್ರೂ ನಾರ್ಣಮಯ್ಯನವರು ಹಬ್ಬಿಸಿಯೇ ಹಬ್ಬಿಸ್ತಾರೆ. 'ನಾನು ಅವ್ಳಿಗೆ ಹೇಳಿದ್ದಲ್ವನ ಮಾರಾಯ... ಬಿಳಿಕೇಪಳ ಮರದ ಕೊಡಿಮರ ಮಾಡದಿದ್ರೆ ದೈವ ಮುನಿದೇ ಮುನಿಯುತ್ತೆ ಅಂತ, ಈಗೇನಾಯ್ತು ನೋಡು...' ಅಂತ ಹೇಳುತ್ತ ಗೆಲುವಿನ ನಗು ನಕ್ಕೇ ಬಿಡ್ತಾರೆ ಅಷ್ಟೇ. ಪಟ್ಲೆರೆ, ನೀವೊಮ್ಮೆ ಹುಸೇನ್‌ಬ್ಯಾರಿಯನ್ನು ಕರೆಸಿ ಮಾತಾಡಿ ನೋಡಿಯಂತೆ...'

'ಯಾತಕ್ಕೆ ಈಗ ಅಂವ... ಹುಸೇನ, ಗುಜ್ಜೆಗೆ ಬೆರಕೆಗಾ? ಅವನ ಸಾವಾಸನೇ ಬೇಡ...' 'ಅಲ್ಲ ಪಟ್ಲೆರೇ, ಮೊನ್ನೆ ಕೊಡಿಮರ ತರುವ ದಿನ, ಅಂವನ ಲಾರಿ ಕೆಸರುಗದ್ದೆಗಳ ನಡುವೆ ಕೆಳಗಿಳಿಯುವಾಗ ತೋರಿದ್ದ ಮೊಂಡುತನವನ್ನು ನೋಡಿ ಅವನು, ಇದ್ದಕ್ಕಿದ್ದಂತೆ ಧೈರ್ಯ ಕಳೆದುಕೊಂಡು ನನ್ನಲ್ಲೇ ಗುಸು ಗುಸು 'ಈ ಪಟ್ಲೇರಿಗೆ ಇಲ್ಲಿದ್ದೇ ಮರಬೇಕಿತ್ತ? ಈ ಕೆಸರು ತುಂಬಿದ ಬೈಲುಗದ್ದೆಗೆ ಈ ಹಡಬೆ ಲಾರಿಯನ್ನು ಇಳಿಸುದು ಹೇಗೆ ಮಾರಾಯ್ರೆ?! ಇಳಿಸಿದ್ರೆ ಸಾಕಾ... ಅದನ್ನು ಗದ್ದೆಯಿಂದ ಮೇಲೆ ಹತ್ತಿಸುದು ಹೇಗೆ?... ನನ್ನಲ್ಲಿ ಒಂದು ಮಾತು ಮೊದಲೇ ಕೇಳ್ತಿದ್ರೆ... ಅಲ್ಲೆ ನನ್ನ ಹೆಂಡತಿಯ ಅಪ್ಪನ ಹಿತ್ತಲಲ್ಲಿದ್ದ ಮರವನ್ನು ಕೊಡಿಸ್ತಿದ್ದೆನಲ್ಲ...' ಅಂತ. ಅಂವ ಹುಸೇನ್‌ಬ್ಯಾರಿ ನನ್ನಲ್ಲಿ ಹಾಗೆ ಹೇಳ್ತಿದ್ದಾಗ, ನಾನಾಗ ತಮಾಷೆಗೆ ಹೇಳಿದ್ದೆ 'ಅಲ್ಲನಾ... ನಿಮ್ಮ ಬ್ಯಾರಿಗಳ ಹಿತ್ತಲಿನ ಮರ ನಮ್ಮ ದೈವದ ಅಂಗಳಕ್ಕೆ ಸಲ್ಲುತ್ತನಾ?' ಅಂತಾ. ಆಗವ ಹೇಳಿದ್ದ 'ನೀವೊಮ್ಮೆ ಸುಮ್ನಿರ್ತಿರಾ ಆಚಾರ್ಲೆ? ಈ ಜಾತಿ, ಗೀತಿ, ದೇವ್ರು, ದಿಂಡ್ರು ಅಂತ ನಾವು ಮಾಡಿಕೊಂಡಿದ್ದು ಅಷ್ಟೇ. ದೇವ್ರಿಗೆ ಎಲ್ಲಿದೆ ಜಾತಿ? ಮೇಲಿರುವ ಎಲ್ಲ ದೇವ್ರುಗಳು ಒಂದೇ ಜಾತಿಯವ್ರು' ಅಂತ. ನೀವೊಮ್ಮೆ ಆ ಹುಸೇನ್ ಬ್ಯಾರಿಯನ್ನು ಕರೆಸಿ ಮಾತಾಡಿದರೆ ನಮ್ಮ ಕೆಲ್ಸ ಸುಲಭದಲ್ಲಿ ಆಗಬಹುದೇನೋ?'

ಶ್ರೀಧರಾಚಾರಿಯ ಮಾತು ಕೇಳಿದ ದೇವಪ್ಪ ಶೆಟ್ರು ಸ್ವಲ್ಪ ಗೆಲುವಾದರು. 'ಅಲ್ಲ ಮಾರಾಯ, ಅವ್ನ ಹೆಂಡ್ತಿಯ ಅಪ್ಪ ನಮಗೇನು ಹೊಸಬರಾ? ಅಬ್ರೆಕೋಡಿ ಕಾದ್ರಿಬ್ಯಾರಿಯ ಮಗಳನ್ನೇ ಅವ್ನಿಗೆ ಕೊಟ್ಟಿದ್ದಲ್ವಾ? ನಮ್ಮ ನದಿಯ ಸೆರಗಲ್ಲೆ... ಹಾಗೇ ಆರು ಪರ್ಲಾಂಗು ಮೂಡ್ಲಾಗಿ ಹೋದ್ರೆ ಸಿಗುದೇ ಅವರ ಅಬ್ರೆಕೋಡಿ ಹಿತ್ತಲು. ಸೀದ ಈಗ್ಲೆ ಹೋಗಿ ಅವರಲ್ಲೇ ಮರ ಕೇಳುವ...' ಎಂದು ಶೆಟ್ಟರೆಂದಾಗ,

"ಅಲ್ಲಾ ಪಟ್ಲೆರೆ ನಿಮ್ಮದು ಒಳ್ಳೆ ಪಂಚಾಯಿತಿಗೆ! 'ಬ್ಯಾರಿಗಳ ಹಿತ್ತಲಲ್ಲಿ ಬೆಳೆದ ಮರ, ನಮ್ಮ ದೈವದ ಕೆಲಸಕ್ಕೆ ಬರುತ್ತಾ ಇಲ್ವಾ...' ಅಂತ ಒಂದು ಮಾತು ವಾಸುತಂತ್ರಿಗಳಲ್ಲಿ ಕೇಳದೆ ಕೈ ಹಾಕುದು ಸರಿ ಅಂತ ನಿಮ್ಗೆ ಅನ್ನಿಸುತ್ತಾ? ನಂಗೇನೋ ಸರಿಯಲ್ಲ ಅಂತ ಅನ್ಸುತ್ತಪ್ಪ.'

'ಆಯ್ತಪ್ಪ... ನಿಂದೇ ಸರಿ; ನಡಿ ನಡಿ... ವಾಸುತಂತ್ರಿಗಳಲ್ಲಿ ಕೇಳಿಯೇ ಬಿಡುವ; ಅವ್ರಲ್ಲಿ ಕೇಳಿದ ನಂತ್ರ, ಅಬ್ರೆಕೋಡಿಯ ಕಾದ್ರಿ ಬ್ಯಾರಿಯವರಲ್ಲಿ ಮರ ಕೇಳಿದ್ರೆ ಆಯ್ತು...' ಎಂದು ಶೆಟ್ಟರು ಹೊರಟು ನಿಂತೊಡನೆ ಶ್ರೀಧರಾಚಾರಿ ಇನ್ನೊಂದು ಅಡ್ಡ ಮಾತೆತ್ತಿದ್ದ.